**O.S** 54/209

**PW-**

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 27.09.2023 ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದಃ ಶ್ರೀ **SSN** ರವರಿಂದ</u>

ನಾನು ಸರ್ವೆ ನಂ.43 ಮತ್ತು 44 ಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿರಬಹುದು, ನನಗೆ ಸ್ಪಷ್ಟವಾಗಿ ಸರ್ವೆ ನಂಬರ್ಗಳು ಗೊತ್ತಿಲ್ಲ. ನಾನು ಯಾವಾ ಯಾವ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳನ್ನು ಕೊಟ್ಟಿರುತ್ತೇನೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು 2 **RTC** ಗಳನ್ನು ಕೊಟ್ಟಿರುವುದಾಗಿ ನುಡಿಯುತ್ತಾರೆ. ಸರ್ವೆ ನಂಬರ್ 44/2 ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇದೆ. ಸರ್ವೆ ನಂಬರ್ 44/2 ರ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನನ್ನ ಅತ್ತೆ ಬಟ್ಟಮ್ಮ ಮತ್ತು ಮಹದೇವಪ್ಪ ರವರ ಹೆಸರುಗಳು ಬರುತ್ತವೆ ಎಂದರೆ ಸಾಕ್ಷಿಯು ಬಟ್ಟಮ್ಮ ಮತ್ತು ಮಾದಪ್ಪ ಎಂಬುವವರ ಹೆಸರುಗಳು ಬರುತ್ತವೆ ಎಂದು ನುಡಿಯುತ್ತಾರೆ. ಸದರಿ **RTC** ಯಲ್ಲಿ ಸಾಗುವಳಿ ಮಾಡುತ್ತಿರುವವ ಕಲಂನಲ್ಲಿ ಪಿ.ಮಹದೇವಪ್ಪ ರವರ ಹೆಸರು ಇದೆ ಎಂದರೆ ಸಾಕ್ಷಿಯು ತಾವೇ ಸಾಗುವಳಿ ಮಾಡುತ್ತಿರುವುದಾಗಿ ನುಡಿಯುತ್ತಾರೆ. ಪಿ. ಮಹದೇವಪ್ಪ ರವರು ಪ್ರತಿವಾದಿಗಳ ತಂದೆ ಎಂದರೆ ನಿಜ.

ನಾನು ಸರ್ವೆ ನಂಬರ್ 44/4 ಇದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಇತ್ತೀಚೆಗೆ ನೋಡಿರುವುದಿಲ್ಲ. ಸರ್ವೆ ನಂಬರ್ 44/4 ಆಸ್ತಿಯ ವಿಸ್ತೀರ್ಣ 2 ಎಕರೆಗಿಂತಲೂ ಸ್ವಲ್ಪ ಜಾಸ್ತಿ, ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಸರ್ವೆ ನಂಬರ್ 44/4 ಇದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸರ್ವೆ ನಂಬರ್ 44/4 ರಲ್ಲಿ 1 ಗುಂಟೆ ಜಮೀನನ್ನು ಸರ್ಕಾರದವರು ಚಾನಲ್‌ಗಾಗಿ ಭೂ ಸ್ವಾಧೀನ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ಸರ್ವೆ ನಂಬರ್ 44/4 ರ ಪಹಣಿ ಪತ್ರಿಕೆಯಲ್ಲಿ ಪಿ.ಮಹದೇವಪ್ಪ ಮತ್ತು ನಾಗಲಿಂಗಪ್ಪ ರವರ ಹೆಸರುಗಳಲ್ಲಿ ಜಂಟಿಯಾಗಿ ಇವೆ ಎಂದರೆ ಸಾಕ್ಷಿಯು ನಮೂದು ಮೋಸದಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ಖಾತೆ ಮೋಸದಿಂದ ಆಗಿರುತ್ತದೆ ಎಂಬುದನ್ನು ಪ್ರಶ್ನಿಸಿ ನಾನು ಉಪ ವಿಭಾಗಾಧಿಕಾರಿಗಳಾಗಲೀ ಅಥವಾ ತಹಶಿಲ್ದಾರ್

ರವರಿಗಾಗಲಿ ಅರ್ಜಿಯನ್ನು ನೀಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ತಾವು ನೇರವಾಗಿ ಈ ನ್ಯಾಯಾಲಯಕ್ಕೆ ಬಂದಿರುವುದಾಗಿ ನುಡಿಯುತ್ತಾರೆ.

ಸರ್ವೆ ನಂಬರ್ 44/4 ರ ಆಸ್ತಿಯನ್ನು ಪ್ರತಿವಾದಿಗಳ ತಂದೆಯು ದೊಡ್ಡಲಿಂಗಪ್ಪನ ಮಗ ಮಹದೇವಪ್ಪನವರಿಗೆ ಆಧಾರ ಮಾಡಿದ್ದರು ಎಂದರೆ ಸರಿಯಲ್ಲ.

1960 ನೇ ಇಸವಿಯಲ್ಲಿ ನನ್ನ ತಂದೆ, ನಾನು ಮತ್ತು ಪ್ರತಿವಾದಿಗಳ ತಂದೆ ಹಾಗೂ 1 ನೇ ಪ್ರತಿವಾದಿ ಎಲ್ಲರೂ ಸೇರಿ ಸರ್ವೆ ನಂಬರ್ 44/4 ರ ಆಸ್ತಿಯನ್ನು ಹೆಗ್ಗವಾಡಿಪುರ ಗ್ರಾಮದ ಸಿ ಮಾದಪ್ಪ ರವರಿಗೆ ಆಧಾರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಾತ ಪುಟ್ಟಮಾದಪ್ಪ ರವರಿಗೆ ಒಟ್ಟು 9 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ತಾಯಿಗೆ ನಾವು ಒಟ್ಟು 9 ಜನ ಮಕ್ಕಳು ಎಂದರೆ ನಿಜ. ನನ್ನ ತಮ್ಮ ಮಾದೇವಸ್ವಾಮಿ ಜೀವಂತವಿದ್ದಾರೆ ಎಂದರೆ ನಿಜ. ನನ್ನ ಮತ್ತೊಬ್ಬ ತಮ್ಮ ವೀರಣ್ಣ ಈಗ ಮೃತ ಪಟ್ಟಿರುತ್ತಾನೆ. ಮಂಗಳಮ್ಮ, ಗೌರಮ್ಮ ಮತ್ತು ಮಂಜುಳ ನನ್ನ ಸಹೋದರಿಯರು ಎಂದರೆ ನಿಜ, ಸಾಕ್ಷಿಯು ಮುಂದುವರೆದು ಮಂಗಳಮ್ಮ ಈಗ ಮೃತ ಪಟ್ಟಿರುತ್ತಾರೆ ಎಂದರೆ ನಿಜ. ನಮ್ಮ ತಂದೆಯ ಮರಣದ ನಂತರ ದಾವಾ ಆಸ್ತಿಯ ಖಾತೆಗಳನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ಕಂದಾಯ ಅಧಿಕಾರಿಗಳಿಗೆ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ನಿಜ. ದಾವಾ ಅಸ್ತಿಗಳನ್ನು ಹೊರತು ಪಡಿಸಿ ನಮ್ಮ ಕುಟುಂಬದ ಬೇರೆ ಆಸ್ತಿಗಳು ನನ್ನ ಮತ್ತು ನನ್ನ ತಮ್ಮ ಮಾದೇವಸ್ವಾಮಿಯ ಹೆಸರಿನಲ್ಲಿ ಖಾತೆಗಳು ಇವೆ ಎಂದರೆ ನಿಜ. 2 ದಾವಾ ಆಸ್ತಿಗಳ ಪಟ್ಟಾ ಪುಸ್ತಕಗಳು ನನ್ನ ಬಳಿ ಇವೆ. ಸದರಿ ಪಟ್ಟಾ ಪುಸ್ತಕಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

(ಈ ಹಂತರದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

27.09.2023.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.